ಸಾಕ್ಷಿಯ ಹೆಸರುಃ ಡಿ ಕೆ ರಾಮೇಗೌಡ

ದಿನಾಂಕಃ **19-07-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಕೆ ವಕೀಲರಿಂದ ಃ**

1) ನಾನು ಈಗ ಸೇವೆಯಿಂದ ನಿವೃತ್ತಿ ಹೊಂದಿರುತ್ತೇನೆ. ಈ ಕೇಸಿನ ವಾಸ್ತವಾಂಶ ತಿಳಿದುಕೊಂಡಿರುತ್ತೇನೆ. ಪ್ರತಿವಾದ ಪತ್ರದಲ್ಲಿ ಏನೇನು ಬರೆದಿದೆ ಎಂದು ತಿಳಿದುಕೊಂಡಿರುತ್ತೇನೆ. ನಾನು ನಾಲ್ಕು ಜನ ಪ್ರತಿವಾದಿ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ನಾನು ಎಲ್ಲರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುತ್ತಾರೆ. ಓ ಎಸ್ 07/2013 ನ್ನು ನಾನು ವಾದಿಯ ವಿರುದ್ದ ಸಲ್ಲಿಸಿ ಡಿಕ್ರಿಯನ್ನು ಪಡೆದಿರುತ್ತೇನೆ ಎಂದರೆ ಸರಿ. ಸದರೀ ಡಿಕ್ರಿಯ ಮೇಲೆ ಹುಣಸೂರಿನ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರೀ ದಾವೆಯಲ್ಲಿ ಸರ್ವೆ ನಂ. 229/1 ರಲ್ಲಿನ ಎರಡು ಎಕರೆ ಜಮೀನನ್ನು ತಿಮ್ಮಮ್ಮ ರವರಿಂದ ಕೊಂಡಿರುತ್ತೇನೆ ಎಂಬ ವಿಷಯಕ್ಕೆ ಡಿಕ್ರಿ ಪಡೆದಿರುತ್ತೇನೆ ಎಂದರೆ ಸರಿ. ಈ ಕುರಿತು ದಾಖಲೆ ಹಾಜರುಪಡಿಸಿರುತ್ತೇನೆ.

2) ಸಾಕ್ಷಿಗೆ ಈಗ ನಿಡಿ 8 ನ್ನು ತೋರಿಸಿ ಇದೇ ಆ ಪತ್ರ ಎಂದು ಕೇಳಿದಾಗ ಸಾಕ್ಷಿ ಈ ಪತ್ರವನ್ನು ನನ್ನ ತಂದೆ ಬರೆಸಿಕೊಂಡಿದ್ದರು ಎನ್ನುತ್ತಾರೆ. 1987 ರಲ್ಲಿ ನನ್ನ ತಂದೆ ಈ ಸ್ವತ್ತನ್ನು ತಿಮ್ಮಮ್ಮರವರಿಂದ ಕ್ರಯಕ್ಕೆ ಕೊಂಡಿದ್ದರು. ನಿಡಿ 8 ರಲ್ಲಿ ಎರಡು ಸ್ವತ್ತುಗಳನ್ನು ನಮೂದಿಸಿದೆ ಎಂದರೆ ಸಾಕ್ಷಿ ಒಂದೇ ಸರ್ವೆ ನಂಬರಿನಲ್ಲಿರುವ ಸ್ವತ್ತುಗಳನ್ನು ನಮೂದಿಸಿದೆ ಎನ್ನುತ್ತಾರೆ. ಈ ಪತ್ರದಲ್ಲಿ ಒಂದು ಎಕರೆ 30 ಗುಂಟೆಗೆ ಒಂದು ಚೆಕ್ಕುಬಂದಿ ಮತ್ತು 10 ಗುಂಟೆಗೆ ಇನ್ನೊಂದು ಚೆಕ್ಕುಬಂದಿ ಬರೆದಿದೆ ಎಂದರೆ ಸಾಕ್ಷಿ ಒಂದೇ ಚೆಕ್ಕುಬಂದಿ ಬರೆದಿದೆ ಎನ್ನುತ್ತಾರೆ. ನಿಡಿ 8 ರಲ್ಲಿ

ಈ ಸ್ವತ್ತುಗಳ ಸರ್ವೆ ನಂ. 229/3 ಎಂದು ಬರೆದಿದೆ ಎಂದರೆ ಸಾಕ್ಷಿ ನನ್ನ ತಂದೆ ಸರ್ವೆ ನಂ. 229/1 ರಲ್ಲಿನ ಸ್ವತ್ತನ್ನು ಕೊಂಡಿರುತ್ತಾರೆ ಎನ್ನುತ್ತಾರೆ. ನಿಡಿ 8 ರಲ್ಲಿ ಒಂದೇ ಐಟಂ ಸ್ವತ್ತು ಮತ್ತು ಒಂದೇ ಚೆಕ್ಕುಬಂದಿ ಮಧ್ಯೆದಲ್ಲಿರುವ ಸ್ವತ್ತು ನನ್ನ ತಂದೆ ಕೊಂಡಿರುತ್ತಾರೆ. ನಿಡಿ 8 ಮತ್ತು ನಿಡಿ 18 ರಲ್ಲಿನ ಸ್ವತ್ತುಗಳ ಸರ್ವೆ ನಂ. ಮತ್ತು ಚೆಕ್ಕುಬಂದಿ ಒಂದೇ ಇದೆ ಎಂದರೆ ಸರಿಯಲ್ಲ.

3) ವಾದಿ ಸರ್ವೆ ನಂ. 229/1 ರಲ್ಲಿನ ಮೂರು ಎಕರೆ 35 ಗುಂಟೆ ಜಮೀನನ್ನು ತಿಮ್ಮಮ್ಮ ರವರಿಂದ ಕೊಂಡು ಕೊಂಡಿರುತ್ತಾರೆ ಎಂದರೆ ಸುಳ್ಳು. ನಿಡಿ 9 ತಿದ್ದುಪಡಿ ಪತ್ರವನ್ನು 2002 ರಲ್ಲಿ ಬರೆಸಿಕೊಂಡಿದ್ದೆವು. ನಾನು, ನನ್ನ ತಂದೆ ಷಾಮೀಲಾಗಿ ತಿಮ್ಮಮ್ಮ ರವರಿಂದ ಈ ಪತ್ರವನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 25-05-1975 ರಂದು ವಾದಿ ಸರ್ವೆ ನಂ. 229/1 ರಲ್ಲಿನ ಮೂರು ಎಕರೆ 35 ಗುಂಟೆ ಜಮೀನನ್ನು ತಿಮಮ್ಮ ರವರಿಂದ ಕೊಂಡಿದ್ದರು ಎಂದರೆ ಸುಳ್ಳು. ಅದೇ ರೀತಿ ದಿಃ 16-01-1966 ರಂದು ವಾದಿಗಳ ತಂದೆ, ಸಣ್ಣಪ್ಪರವರಿಂದ ಸರ್ವೆ ನಂ. 229/1 ರಲ್ಲಿನ ಎರಡು ಎಕರೆ ಜಮೀನನ್ನು ಕೊಂಡು ಕೊಂಡಿದ್ದರು ಎಂದರೆ ಸುಳ್ಳು. ಊರಿನಲ್ಲಿ ಸಣ್ಣಪ್ಪ ರವರನ್ನು ಸಣ್ಣೇಗೌಡ ಎಂದಲೂ ಕೂಡ ಕರೆಯುತ್ತಿದ್ದರು ಎಂದರೆ ಇರಬಹುದು ನನಗೆ ಗೊತ್ತಿಲ್ಲ.

4) ದಿಃ 25-05-1975 ರಂದು ವಾದಿಯವರು ಕೊಂಡ ಜಮೀನಿನಲ್ಲಿ ಈಗಲೂ ಸಹ ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸುಳ್ಳು. ಸರ್ವೆ ನಂ. 229/1 ರಲ್ಲಿ ಎರಡು ಎಕರೆ ಜಮೀನುಗಳನ್ನು ಹೊರತುಪಡಿಸಿ ತಿಮ್ಮಮ್ಮ ನವರಿಗೆ ಬೇರೆ ಯಾವುದೇ ಜಮೀನು ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎನ್ನುತ್ತಾರೆ. 2002 ರಲ್ಲಿ ತಿಮ್ಮಮ್ಮ ತಿದ್ದುಪಡಿ ಪತ್ರ ಮಾಡಿಕೊಡುವಾಗ ಸ್ವತ್ತುಗಳ ಮೇಲೆ ಹಕ್ಕನ್ನು ಹೊಂದಿದ್ದರು, ಸಾಕ್ಷಿ ಮುಂದುವರೆದು ಸರ್ವೆ ನಂಬರ್ ಗೆ ಮತ್ತು ಪೋಡಿಗೆ ಸಂಬಂಧಿಸಿದಂತೆ ಮಾತ್ರ ತಿದ್ದುಪಡಿ ಪತ್ರ ಬರೆಯಲಾಗಿತ್ತು ಎನ್ನುತ್ತಾರೆ. 1974 ರಲ್ಲಿ ತಿಮ್ಮಮ್ಮ ನವರು ತಿಮ್ಮೇಗೌಡ ಃಉಃ ಅಣ್ಣಯ್ಯ ನಿಂದ ಸ್ವತ್ತನ್ನು ಕೊಂಡು ಕೊಳ್ಳುವಾಗ ಸರ್ವೆ ನಂ. 229/1 ಮತ್ತು 229/3 ರಲ್ಲಿನ ಸ್ವತ್ತಿನ ಚೆಕ್ಕುಬಂದಿಯನ್ನು ಬೇರೆ ಬೇರೆಯಾಗಿ ನಮೂದಿಸಿದ್ದರು ಎಂದರೆ ಸಾಕ್ಷಿ ಸರ್ವೆ ನಂ.

229/1 ಮತ್ತು ಸರ್ವೆ ನಂ. 229/3 ಕ್ಕೆ ಬೇರೆ ಬೇರೆ ಚೆಕ್ಕುಬಂದಿಗಳು ಬರುತ್ತವೆ ಎನ್ನುತ್ತಾರೆ.

5) ಸರ್ವೆ ನಂ. 229/1 ರಲ್ಲಿನ ಮೂರು ಎಕರೆ 35 ಗುಂಟೆ ಜಮೀನಿನ ಚೆಕ್ಕುಬಂದಿ, ಪೂರ್ವಕ್ಕೆ ಪೂಜಾರಿ ದಾಸೇಗೌಡರ ಜಮೀನು, ಪಶ್ಚಿಮಕ್ಕೆ ಹರಿಜನರ ಕರಿಯನ ಜಮೀನು, ದಕ್ಷಿಣಕ್ಕೆ ಪೂಜಾರಿ ದಾಸೇಗೌಡರ ಜಮೀನು ಮತ್ತು ಉತ್ತರಕ್ಕೆ ತಿಮ್ಮೇಗೌಡ ರ ಜಮೀನು ಇದೆ ಎಂದು ನಿಡಿ 10 ರಲ್ಲಿ ನಮೂದಿಸಿದೆ ಎಂದರೆ ಸುಳ್ಳು. ಸರ್ವೆ ನಂ.229/1 ರಲ್ಲಿನ ಒಂದು ಎಕರೆ 30 ಗುಂಟೆ ಜಮೀನಿನ ಚೆಕ್ಕುಬಂದಿ, ಪೂರ್ವಕ್ಕೆ ಬೋರಣ್ಣನ ಕಟ್ಟೆ, ಪಶ್ಚಿಮಕ್ಕೆ ಪೂಜಾರಿ ದಾಸೇಗೌಡರ ಜಮೀನು, ದಕ್ಷಿಣಕ್ಕೆ ಪೂಜಾರಿ ದಾಸೇಗೌಡರ ಜಮೀನು ಮತ್ತು ಉತ್ತರಕ್ಕೆ ಜವರೇಗೌಡ ರ ಜಮೀನು ಇದೆ ಎಂದು ನಿಡಿ 10 ರಲ್ಲಿ ನಮೂದಿಸಿದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಈ ಚೆಕ್ಕುಬಂದಿ ಸರಿ ಇದೆ ಎನ್ನುತ್ತಾರೆ. ಇನ್ನೂ ಹತ್ತು ಗುಂಟೆಗೆ ಇದೇ ಚೆಕ್ಕುಬಂದಿ ಬರೆಯಲಾಗಿದೆ ಎಂದರೆ ಸಾಕ್ಷಿ ಎರಡು ಎಕರೆ ಜಮೀನಿಗೆ ಒಂದೇ ಚೆಕ್ಕುಬಂದಿ ಇದೆ ಎನ್ನುತ್ತಾರೆ.

6) ಓ ಎಸ್ ನಂ. 07/2013 ರಲ್ಲಿ ನಾವು ತಿಮ್ಮಮ್ಮನಿಂದ ಸರ್ವೆ ನಂ.229/1 ರಲ್ಲಿ ಎರಡು ಎಕರೆ ಜಮೀನನ್ನು ಕೊಂಡಿರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ನಿಡಿ 8 ಮತ್ತು 16 ರಲ್ಲಿ ನಾವು ತಿಮ್ಮಮ್ಮನಿಂದ ಸರ್ವೆ ನಂ. 229/1 ರಲ್ಲಿ ಎರಡು ಎಕರೆ ಜಮೀನನ್ನು ಕೊಂಡಿರುತ್ತೇವೆ ಎಂದು ನಮೂದಿಸಿದ್ದು ಉಳಿದ ಯಾವುದೇ ದಾಖಲೆಗಳನ್ನು ಈ ವಿಷಯ ನಮೂದಿಸಿಲ್ಲ ಎಂದರೆ ಸಾಕ್ಷಿ ಒಟ್ಟಿನಲ್ಲಿ ದಾಖಲೆ ಹಾಜರುಪಡಿಸಿರುತ್ತೇವೆ ಎನ್ನುತ್ತಾರೆ. ಓ.ಎಸ್ 07/2013 ರಲ್ಲಿ ದಾವಾ ಸ್ವತ್ತಿನ ಸರ್ವೆ ನಂ.229/1 ರಲ್ಲಿನ ಎರಡು ಎಕರೆ ಜಮೀನಿಗೆ ಚೆಕ್ಕುಬಂದಿ, ಪೂರ್ವಕ್ಕೆ ಸರ್ಕಾರಿ ಬೋರಣ್ಣನ ಕಟ್ಟೆ, ಪಶ್ಚಿಮಕ್ಕೆ ದಾಸೇಗೌಡರ ಜಮೀನು, ದಕ್ಷಿಣಕ್ಕೆ ದಾಸೇಗೌಡರ ಜಮೀನು ಮತ್ತು ಉತ್ತರಕ್ಕೆ ಚಿಕ್ಕೇಗೌಡರ ಜಮೀನು ಇದೆ ಎಂದು ನಮೂದಿಸಿದೆ ಎಂದರೆ ಸರಿ.

7) ನಾವು ಓ ಎಸ್ 07/2013 ರಲ್ಲಿ ಡಿಕ್ರಿ ಪಡೆದುಕೊಂಡ ಸ್ವತ್ತಿನ ಚೆಕ್ಕುಬಂದಿ ಮತ್ತು ತಿಮ್ಮಮ್ಮ ನವರು ಅಣ್ಣಯ್ಯನವರಿಂದ ಕೊಂಡ ಸ್ವತ್ತಿನ ಚೆಕ್ಕುಬಂದಿ ಒಂದೇ ಆಗಿದೆ ಎಂದರೆ ಸರಿ. ನಾನು ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಸಲ್ಲಿಸಿದ ಮೇಲ್ಮನವಿ ವಜಾ ಆಗಿದೆ ಎಂದರೆ ಸಾಕ್ಷಿ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿದ್ದರು ಎನ್ನುತ್ತಾರೆ. ನಿಡಿ 13 ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.229/3 ಕ್ಕೆ ಎರಡು ಎಕರೆ ಜಮೀನಿಗೆ ಶಿವಮ್ಮ, ಚಿಕ್ಕೇಗೌಡ, ಸುಬ್ಬೇಗೌಡ ಮತ್ತು ರಾಮೇಗೌಡ ಎಂದು ಹೆಸರು ನಮೂದಾಗಿದೆ ಎಂದರೆ ಈ ಪಹಣಿ ಪತ್ರಿಕೆಯ ಮೇಲೆ ನಾವು ಅನುಭವದಂತೆ ಸರ್ವೆ ನಂ.229/1 ರಲ್ಲಿ ಸ್ವಾಧೀನ ಹೊಂದಿರುತ್ತೇವೆ ಎಂದು ಅದಕ್ಕೆ ಖಾತಾ ಬದಲಾವಣೆ ಮಾಡಿಕೊಡಿ ಎಂದು ಕಂದಾಯ ಇಲಾಖೆಗೆ ಮೇಲ್ಮನವಿ ಸಲ್ಲಿಸಿದ್ದೆವು ಎನ್ನುತ್ತಾರೆ. ನಿಡಿ 12 ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.229/1 ಕ್ಕೆ ಮೂರು ಎಕರೆ 09 ಗುಂಟೆ ಜಮೀನಿಗೆ 1 ನೇ ವಾದಿ ರಾಜೇಗೌಡ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅದು 2005-06 ನೇ ಇಸವಿಗೆ ಸಂಬಂಧಿಸಿದ ದಾಖಲೆ ಎನ್ನುತ್ತಾರೆ.

8) ಸರ್ವೆ ನಂ.229/1 ರಲ್ಲಿ ಮೂರು ಎಕರೆ 35 ಗುಂಟೆ ಮತ್ತು ಸರ್ವೆ ನಂ.229/3 ರಲ್ಲಿ ಎರಡು ಎಕರೆ ಜಮೀನನ್ನು ಹೊರತುಪಡಿಸಿ ತಿಮ್ಮಮ್ಮ ರವರಿಗೆ ಬೇರೆ ಜಮೀನು ಇರಲಿಲ್ಲ ಎಂದರೆ ಸಾಕ್ಷಿ ಐದು ಎಕರೆ 35 ಗುಂಟೆ ಜಮೀನನ್ನು ಬಿಟ್ಟು ಬೇರೆ ಜಮೀನು ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಡಿ 14 ಎಂ ಆರ್ ಪ್ರಕಾರ ಸರ್ವೆ ನಂ.229/3 ಕ್ಕೆ ಎರಡು ಎಕರೆ ಜಮೀನಿಗೆ ಶಿವಮ್ಮ, ಚಿಕ್ಕೇಗೌಡ, ಸುಬ್ಬೇಗೌಡ ಮತ್ತು ರಾಮೇಗೌಡ ರವರ ಹೆಸರಿಗೆ ಜಂಟಿ ಖಾತೆ ಆಗಿದೆ ಎಂದರೆ ಸಾಕ್ಷಿ ಅದು 2011-12 ಸಾಲಿನ ದಾಖಲೆ ಎನ್ನುತ್ತಾರೆ. ನಿಡಿ 15 ರ ಎಂ ಆರ್ ಪ್ರಕಾರ ಸರ್ವೆ ನಂ.229/1 ಕ್ಕೆ ಮೂರು ಎಕರೆ 09 ಗುಂಟೆ, 2 ನೇ ವಾದಿಯ ಹೆಸರಿಗೆ ಎರಡು ಎಕರೆ 25 ಗುಂಟೆ ಖಾತೆ ಆಗಿದೆ ಎಂದು ನಮೂದಿಸಿದೆ ಎಂದರೆ ಸಾಕ್ಷಿ ಅದು 2005-06 ನೇ ಸಾಲಿನ ದಾಖಲೆ ಎನ್ನುತ್ತಾರೆ.

9) ನಿಡಿ 16 ಸರ್ವೆ ನಕ್ಷೆ ಯಾವ ವರ್ಷ ಮತ್ತು ದಿನಾಂಕಕ್ಕೆ ಸಂಬಂಧಿಸಿದೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಸರ್ವೆಯರ್ ನೀಡಿರುತ್ತಾರೆ ಎನ್ನುತ್ತಾರೆ. ನಾನು ಕಂದಾಯಾಧಿಕಾರಿಗಳೊಂದಿಗೆ ಷಾಮೀಲಾಗಿ ನಿಡಿ 16 ನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸುಳ್ಳು. ದಾಸೇಗೌಡರು ಸಣ್ಣೇಗೌಡರಿಗೆ ಸರ್ವೆ ನಂ. 229/1 ರಲ್ಲಿನ ಎರಡು ಎಕರೆ ಜಮೀನನ್ನು 1966 ರಲ್ಲಿ ಮಾರಾಟ ಮಾಡಿದ್ದರು. ನಿಡಿ 17 ರಲ್ಲಿ ದಾಸೇಗೌಡರು ಸಣ್ಣೇಗೌಡರ ಮಗ ಸಣ್ಣಪ್ಪನಿಗೆ ಮಾರಾಟ ಮಾಡಿರುವುದು ಸರ್ವೆ ನಂ. 229/3 ರಲ್ಲಿನ ಎರಡು ಎಕರೆ ಜಮೀನು ಎಂದರೆ ಸುಳ್ಳು. ಹುಚ್ಚೇಗೌಡರ ಮಗ ದಾಸೇಗೌಡ (ವಾದಿಯ ತಂದೆ) ರವರಿಗೆ, ಸಣ್ಣೇಗೌಡರ ಮಗ ಸಣ್ಣಪ್ಪ ಸರ್ವೆ ನಂ. 229/1 ರಲ್ಲಿನ ಮೂರು ಎಕರೆ 35 ಗುಂಟೆ ಜಮೀನನ್ನು ಬೋಗ್ಯಕ್ಕೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರೀ ಬೋಗ್ಯದ ಅವಧಿ ಎಂಟು ವರ್ಷ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಸರ್ವೆ ನಂ. 229/1 ರಲ್ಲಿನ ಎರಡು ಎಕರೆ ಜಮೀನಿನ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸುಳ್ಳು. ಓ ಎಸ್ 07/2013 ರಲ್ಲಿನ ದಾವಾ ಸ್ವತ್ತಿನ ಚೆಕ್ಕುಬಂದಿ ಮತ್ತು ಓ ಎಸ್ ನಂ. 42/2019 ರಲ್ಲಿನ ದಾವಾ ಸ್ವತ್ತಿನ ಚೆಕ್ಕುಬಂದಿ ಬೇರೆ ಬೇರೆ ಆಗಿದೆ ಎಂದರೆ ಸುಳ್ಳು.

**ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.